**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತ್ವರಿತ ವಿಶೇಷ ನ್ಯಾಯಾಲಯ–I, ಚಾಮರಾಜನಗರ**

**<u>SC No.48/2022</u>**

ಚಾಸಾ:01/ಪ್ರಾಸಾ:**01**

ದಿನಾಂಕ **03.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಪುಟ್ಟಸ್ವಾಮಿ** |
| **ತಂದೆ** / ಗಂಡನ ಹೆಸರು | : | ಲೇಟ್ ಶಿವಪ್ಪ |
| ವಯಸ್ಸು | : | 68 ವರ್ಷ |
| ವೃತ್ತಿ | : | ವ್ಯವಸಾಯ |
| ವಿಳಾಸ | : | ಮರಿಯಾಲ ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ. |

**<u>ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ಚಾಸಾಃ2 ನನ್ನ ಮಗ. ಚಾಸಾಃ3 ರಿಂದ 7ರವರು ನಮ್ಮ ಗ್ರಾಮದವರು, ಅವರ ಪರಿಚಯ ಇದೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ 1 ರಿಂದ 3ರವರ ಪರಿಚಯ ಇದೆ, ಅವರ ಜಮೀನು ನಮ್ಮ ಜಮೀನಿನ ಪೂರ್ವದ ಕಡೆ ಇದೆ. ಚಾಮರಾಜನಗರ – ನಂಜಗೂಡು ಹೆದ್ದಾರಿಯಲ್ಲಿ ಸರ್ವೆ ನಂಬರ್ 265/2ರಲ್ಲಿ ಒಟ್ಟು 7 ಎಕರೆ ಜಮೀನು ನನಗೆ ಇದೆ.

02. ನಮ್ಮ ಜಮೀನಿಗೆ 4 ಕಡೆಯೂ ಬೇಲಿ ಇದೆ. ನಮ್ಮ ಜಮೀನಿನಲ್ಲಿ ಮುಳ್ಳು ತಂತಿ ಹಾಕಿಸಲು ಕಲ್ಲು ಕಂಬವನ್ನು ನೆಡುವ ಸಲುವಾಗಿ ಪುಟ್ಟನಂಜಪ್ಪರವರಿಗೆ ತಿಳಿಸಿ ತಂತಿ ಬೇಲಿಯನ್ನು ಅಳವಡಿಸುತ್ತಿದ್ದೆ. ನಾವು ತಂತಿ

ಬೇಲಿಯನ್ನು ಹಾಕಿಸುತ್ತಿರುವ ಸಂದರ್ಭದಲ್ಲಿ ಪುಟ್ಟನಂಜಪ್ಪರವರೂ ಸಹ ಇದ್ದರು.

**03**. ದಿನಾಂಕ 08.03.2018ರಂದು ನಾನು, ಚಾಸಾಃ4, 5, 6, 7ರವರನ್ನು ಕರೆದುಕೊಂಡು ಕಲ್ಲು ಕಂಬಳಿಗೆ ತಂತಿಯನ್ನು ಎಳೆಸುತ್ತಿದ್ದೆ 2 ಲೈನ್ ತಂತಿ ಎಳೆದು ಹಾಕಿತ್ತು, 3ನೇ ಲೈನ್ ಎಳೆಯುತ್ತಿದ್ದೆವು ಆಗ ಸಮಯ ಸುಮಾರು ಮಧ್ಯಾಹ್ನ 1.00 ಗಂಟೆಯಾಗಿತ್ತು. ಆರೋಪಿ 1 ರಿಂದ 3ರವರು ಯಾಕೆ ತಂತಿ ಎಳೆಸುತ್ತಿದ್ದೀಯಾ ನೀನು ಏನಾದರೂ ಹೇಳಿದರೂ ಸುಮ್ಮನಾಗುವುದಿಲ್ಲ, ಬೋಳಿಮಗನೆ ಸೂಳೆ ಮಗನೆ ಎಂದು ಬೈಯ್ಯುತ್ತಾ ನಮ್ಮ ಜಮೀನಿಗೆ ಬಂದರು. ನೀನು ತಂತಿ ಬೇಲಿಯನ್ನು ಹಾಕಿದರೆ ಸುಮ್ಮನಾಗುವುದಿಲ್ಲ ನಿನ್ನನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ, ನಿನ್ನನ್ನು ಸಾಯಿಸುತ್ತೇವೆ ಎಂದು ಬೈದರು. ಮೂರೂ ಜನರು ಸ್ಥಳಕ್ಕೆಬಂದ ನಂತರ ಮಾತು ಮಾತಿಗೆ ಘರ್ಷಣೆಯಾಯಿತು. ಪುಟ್ಟನಂಜಪ್ಪ ಹಾಗೂ ಮಹದೇವಪ್ಪರವರು ನನ್ನಕ್ಕೆ ತಬ್ಬಿಕೊಂಡು ಕೆಳಗೆ ಕೆಡವಿದರು. 1ನೇ ಆರೋಪಿಯಾದ ಮಂಜುನಾಥನು ಸ್ಥಳದಲ್ಲೇ ಇದ್ದ ಕಬ್ಬಿಣದ ಹಾರೆಕೋಲನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆಯಲು ಪ್ರಯತ್ನಿಸಿದನು, ಆಗ ನಾನು ತಪ್ಪಿಸಿಕೊಂಡಾಗ ಹಾರೆಯ ಏಟು ನನ್ನ ಎಡಗಾಲಿಗೆ ಬಿದ್ದು ಪೆಟ್ಟಾಯಿತು. 1ನೇ ಆರೋಪಿ ಇನ್ನೊಂದು ಬಾರಿ ನನ್ನ ತಲೆಗೆ ಹಾರೆಕೋಲಿನಿಂದ ಹೊಡೆಯಲು ಪ್ರಯತ್ನಿಸಿದಾಗ ನನ್ನ ಮಗ ವಿನಯಕುಮಾರ್ ಹಾಗೂ ಕೆಲಸ ಮಾಡುತ್ತಿದ್ದ ಆಳುಗಳಾದ ಚಾಸಾಃ4, 5, 6, 7ರವರು ಸ್ಥಳಕ್ಕೆ ಬಂದು 1ನೇ ಆರೋಪಿಯ ಕೈಯಲ್ಲಿದ್ದ ಹಾರೆಕೋಲನ್ನು ಕಿತ್ತು ಬಿಸಾಕಿ ಜಗಳ ಬಿಡಿಸಿದರು. ಆಗ ಆರೋಪಿಗಳು ಸ್ಥಳದಿಂದ ಹೋಗುತ್ತಾ, ನೀನು ತಂತಿ ಕಂಬ

ಹಾಕಿದ್ದೀಯಾ, ನೀನೇನಾದರು ತಂತಿಗಳನ್ನು ಎಳೆಸಲು ಪ್ರಯತ್ನ ಪಟ್ಟರೆ ನಿನ್ನನ್ನು, ನಿನ್ನ ಮಗನನ್ನು ಬಿಡುವುದಿಲ್ಲ, ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು. ನಂತರ ನನ್ನನ್ನು ಚಾಸಾಃ2 ಮತ್ತು 3ರವರು ಚಾಮರಾಜನಗರದ ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲು ಮಾಡಿದರು. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಸಾಯಂಕಾಲ 5.00 ಗಂಟೆಯ ವೇಳೆಯಲ್ಲಿ ಪೊಲೀಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿದರು, ಆ ಸಮಯದಲ್ಲಿ ಡಾಕ್ಟರ್ ರವರೂ ಸಹ ಇದ್ದರು. ನಾನು ಹೇಳಿದ ಸಂಗತಿಗಳನ್ನು ಪೊಲೀಸರು ಬರೆದುಕೊಂಡು ನನ್ನ ರುಜು ಮಾಡಿಸಿಕೊಂಡಿರುತ್ತಾರೆ. ಸಾಕ್ಷಿ ದಿನಾಂಕ 08.03.2018ರ ಹೇಳಿಕೆಯ ರೂಪದ ದೂರಿನಲ್ಲಿ ತಮ್ಮ ರುಜುವನ್ನು ಗುರುತಿಸಿರುತ್ತಾರೆ, ಸದರಿ ದೂರನ್ನು ನಿಪಿಃ**1** ಎಂದು, ಸಾಕ್ಷಿಯ ರುಜುವನ್ನು ನಿಪಿಃ**1(ಎ)** ಎಂದು ಗುರುತಿಸಲಾಯಿತು. 1ನೇ ಆರೋಪಿ ಮಂಜುನಾಥನು ನನ್ನ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದ ಹಾರೆಕೋಲನ್ನು ನೋಡಿದರೆ ಗುರುತಿಸುತ್ತೇನೆ. ಪಿಎಫ್ 44/2018ರಲ್ಲಿ ವರದಿಯಾಗಿರುವ ಒಂದು ಕಬ್ಬಿಣದ ಹಾರೆಕೋಲನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು **ಮುದ್ದೆಮಾಲುಃ1** ಎಂದು ಗುರುತಿಸಲಾಯಿತು. ನಾನು ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಪಿಎಫ್ 49/2018 ಕ್ರಮ ಸಂಖ್ಯೆ 1 ರಲ್ಲಿ ವರದಿಯಾಗಿರುವ ಬಟ್ಟೆಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ, ಅವುಗಳನ್ನು ಕೆಳಕಂಡಂತೆ ಗುರುತಿಸಲಾಯಿತು.

| | | |
|---|---|---|
| 01 | ಬಿಳಿ ಮತ್ತು ಸಿಮೆಂಟ್ ಗೆರೆಗಳಿಂದ ಕೂಡಿದ ನೀಲಿ ಬಣ್ಣದ ಲುಂಗಿ | **ಮುದ್ದೆಮಾಲುಃ-2** |
| 02 | ಬಿಳಿ ಮತ್ತು ಹಸಿರು ಗೆರೆಗಳಿಂದ ಕೂಡಿದ ಅರ್ಧ ತೋಳಿ ಶರ್ಟ್ | **ಮುದ್ದೆಮಾಲುಃ-3** |
| 03 | ಬಿಳಿ ಬಣ್ಣದ ಸ್ಯಾಂಡೋ ಬನಿಯನ್ | **ಮುದ್ದೆಮಾಲುಃ-4** |

**04**. ನಾನು ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅನ್ನಪೂರ್ಣೇಶ್ವರಿ ಆಸ್ಪತ್ರೆಗೆ ದಾಖಲಾದೆ, ನನ್ನ ಎಡಗಾಲಿಗೆ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನಾನು ಅಂದಾಜು 8 ರಿಂದ 10 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

**ಪಾಟೀ ಸವಾಲು ಆರೋಪಿ 1 ರಿಂದ 3 ನೇ ಪರವಾಗಿಃ ಶ್ರೀ ಸಿ ಎನ್ ಆರ್ ವಕೀಲರಿಂದ**

ಆರೋಪಿಗಳ ಪರ ವಕೀಲರು ಹಾಜರಿದ್ದು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಅವರ ವಿನಂತಿಯ ಮೇರೆಗೆ ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓದಿ ಹೇಳಲಾಗಿ ಕೇಳಿ ಸರಿಯಿದೆ ಎಂದು ಒಪ್ಪಿರುತ್ತಾರೆ.

**(ಎಸ್.ಜೆ. ಕೃಷ್ಣ)**
ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ತ್ವರಿತ ವಿಶೇಷ ನ್ಯಾಯಾಲಯ-I, ಚಾಮರಾಜನಗರ.

S J KRISHNA
Digitally signed by S J KRISHNA
Date: 2026.02.06 17:08:59 +0530